**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC** 410/2024 **PW** -2

**ದಿಃ 13.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರ ಪರ ವಕೀಲರಾದ ಶ್ರೀ M.Y.A ರವರಿಂದ.**

ನಾನು ಬದಾಮಿಯಲ್ಲಿ ವಾಸ ಇರುತ್ತೇನೆ. ನಾನು ಗುಳೇದ ಊರಿನಲ್ಲಿ ತಹಶೀಲ್ದಾರ ಕಚೇರಿಯಲ್ಲಿ ದ್ವಿತಿಯ ದರ್ಜೆ ಸಹಾಯಕನಾಗಿ ಕೆಲಸ ಮಾಡುತ್ತೇನೆ. ನಾನು ಈ ದಿನ ರಜೆ ಹಾಕಿ ಬಂದಿರುತ್ತೇನೆಂದರೆ ಸರಿ. ಸದರಿ ಅಪಘಾತ ದಿಃ30-01-2024 ರಂದು ನಡೆದಿರುತ್ತದೆ. ಆಗ ಸಮಯ 6 ಗಂಟೆ ಆಗಿತ್ತು. ಪೋಲೀಸರಿಗೆ ದೂರನ್ನು ನಾನೇ ಕೊಟ್ಟಿರುತ್ತೇನೆ. ಎಮ್ಮೆಗಳು ಅಡ್ಡ ಬಂದಿದ್ದರಿಂದ ಕಾರಿನ ಚಾಲಕ ಮೊದಲು ಹೋಗಿ ಮರಕ್ಕೆ ಡಿಕ್ಕಿ ಹೊಡೆದನು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಮರಕ್ಕೆ ಡಿಕ್ಕಿ ಹೊಡೆದು ನಂತರ ತಿರುಗಿ ನಮಗೆ ಡಿಕ್ಕಿ ಹೊಡೆದಿರುತ್ತದೆ. ಮರಕ್ಕೆ ಡಿಕ್ಕಿ ಹೊಡೆದು ನಿಂತಿದ್ದ ಕಾರಿಗೆ ಚೇತನ ಇವರು ಜೋರಾಗಿ ಹೋಗಿ ತಮ್ಮ ಬೈಕನ್ನು ಡಿಕ್ಕಿ ಹೊಡೆದರು ಎಂದರೆ ಸಾಕ್ಷಿ ಆತ ಹೊಡೆದಿಲ್ಲ ಕಾರಿನವರೆ ಬಂದು ಹೊಡೆದಿರುತ್ತಾರೆ ಎನ್ನುತ್ತಾರೆ. ನಾವು ಹೊರಟ್ಟಿದ್ದ ಬೈಕಗೆ ವಿಮೇ ಇರಲಿಲ್ಲವೆಂದರೆ ಸರಿ. ನಮ್ಮ ತಪ್ಪಿನಿಂದ ಅಪಘಾತ ಮಾಡಿಕೊಂಡಿರುತ್ತೇವೆ ಎಂಬುವುದು ಗೊತ್ತಾದರೆ ತಪ್ಪಾಗುತ್ತದೆ ಎಂಬ ಕಾರಣಕ್ಕೆ ಕಾರಿನವನ ಮೇಲೆ ಸುಳ್ಳು ಕೇಸು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ತಿರುವು ಇದೆ ಎಂದಾದರೆ ಎಲ್ಲರೂ ಗಾಡಿ slow ಮಾಡುತ್ತಾರೆ ಎಂದರೆ ಕಾರಿನವನು ಮಾಡಿಲ್ಲ ಎನ್ನುತ್ತಾರೆ. ಸರ್ಕಾರಿ ನೌಕರಿ ಮಾಡುತ್ತೇವೆ ಎಂದರೆ ನಮಗೆ ವರ್ಷದಿಂದ ವರ್ಷಕ್ಕೆ ಪಗಾರ ಹೆಚ್ಚಾಗುತ್ತಾ ಹೋಗುತ್ತದೆ ಎಂದರೆ ಸರಿ. ಅಪಘಾತವಾದಾಗ ನಾನು 25,000/- ಪಗಾರ ಪಡೆಯುತ್ತಿದ್ದೆ. ಈಗ ನಾನು 33,000/- ರೂಪಾಯಿ ಪಗಾರ ಪಡೆಯುತ್ತಿದ್ದೇನೆ. ನಾನು ಸರಿಯಾಗಿ ಕಚೇರಿಗೆ ಹೋಗಿ ಕೆಲಸ ಮಾಡುತ್ತಿದ್ದೇನೆಂದರೆ ಸರಿ. ನನಗೆ ಅಪಘಾತದಿಂದ ಸಾದಾ ಸ್ವರೂಪದ ಗಾಯಗಳು ಆಗಿದ್ದವು ಎಂದರೆ ಸಾಕ್ಷಿ ಗಾಯಗಳಾಗಿದ್ದವು ಆದರೆ ಎದೆಯ ಎಲುಬಿಗೆ ಪೆಟ್ಟು ಬಿದ್ದಿರುತ್ತದೆ, ಈಗಲೂ ಪೆಟ್ಟು ಇದೆ ಎನ್ನುತ್ತಾರೆ. ಸದರಿ ಗಾಯಗಳು ಈಗ ಸಂಪೂರ್ಣ ಗುಣ ಆಗಿದೆ ಎಂದರೆ ಸಾಕ್ಷಿ ಗುಣ ಆಗಿದೆ ಆದರೆ ನೋವಿದೆ ಎನ್ನುತ್ತಾರೆ. ನಾನು ನನ್ನ ಚಿಕಿತ್ಸೆಗಾಗಿ ಖರ್ಚು ಮಾಡಿದ ಹಣವನ್ನು ಸರ್ಕಾರದಿಂದ ಮರುಪಾವತಿ ತೆಗೆದಿರುತ್ತೇನೆಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ನನ್ನ ಕಚೇರಿಯಲ್ಲಿ ಈ ಸಂಬಂಧ ದಾಖಲೆಯನ್ನು ತಂದು ಹಾಜರುಪಡಿಸುತ್ತೇನೆ. ನಾನು ಸದರಿ ಹಣವನ್ನು ಮರುಪಾವತಿ ಪಡೆದುಕೊಂಡಿದ್ದರು ಸಹ ಇಲ್ಲಿ ಕಾಗದ ಪತ್ರಗಳನ್ನು ಸೃಷ್ಟಿ ಮಾಡಿ

ಹಾಜರುಪಡಿಸಿರುತ್ತೇನೆಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮೋಟಾರ ಸೈಕಲ್ ಚಾಲಕನನ್ನು ಆರೋಪಿ ನಂಬರ 2 ಎಂದು ದೋಷಾರೋಪಣೆ ಪಟ್ಟಿಯಲ್ಲಿ ಸೇರಿಸಿರುತ್ತಾರೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿಗೆ ದೋಷಾರೋಪಣೆ ಪಟ್ಟಿ ನಿಶಾನೆ ಪಿ 6 ನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಹೌದು ಎನ್ನುತ್ತಾರೆ. ಈ ಕೇಸನಲ್ಲಿ ಮೋಟಾರ ಸೈಕಲ್ ಚಾಲಕ ಮತ್ತು ಮಾಲೀಕರನ್ನು ಪಕ್ಷಗಾರನ್ನಾಗಿ ಮಾಡಿಲ್ಲವೆಂದರೆ ಸಾಕ್ಷಿ ಮಾಡಿಲ್ಲ ಎನ್ನುತ್ತಾರೆ. ಮೋಟಾರ ಸೈಕಲ್ ನ್ನು ಈ ಕೇಸನಲ್ಲಿ ಪಕ್ಷಗಾರನ್ನಾಗಿ ಮಾಡಿಲ್ಲವಾದ ಕಾರಣ ಸದರಿ ಕೇಸು ಕಾನೂನು ಬದ್ಧವಾಗಿ ನಿಲ್ಲುವುದಿಲ್ಲವೆಂದರೆ ಸಾಕ್ಷಿ ಸುಮ್ಮನೆ ನಿಲ್ಲುತ್ತಾರೆ. ಆದ್ದರಿಂದ 2 ನೇ ಎದುರುದಾರರು ನಮಗೆ ಪರಿಹಾರ ಕೊಡಲು ಬಾಧ್ಯಸ್ಥರು ಅಲ್ಲವೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ

## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**MVC** 410/2024 **PW** –1

**ದಿಃ 13.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.ಸ**

**ಪಾಟೀ ಸವಾಲುಃ 2 ನೇ ಎದುರುದಾರ ಪರ ವಕೀಲರಾದ ಶ್ರೀ M.Y.A ರವರಿಂದ.**

ನಾನು ಬದಾಮಿಯಲ್ಲಿ ವಾಸ ಇರುತ್ತೇನೆ. ನಾನು ಶಾಖಾಂಬರಿ ಮಹಿಳಾ ಪತ್ತಿನ ಸಹಕಾರ ಸಂಘದಲ್ಲಿ ಮ್ಯಾನೇಜರನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ನಾನು ಈ ದಿನ ಬದಾಮಿನಿಂದಲೆ ಬಂದಿರುತ್ತೇನೆ ಎಂದರೆ ಸರಿ. ಅಪಘಾತವಾದ ದಿನ ಮೋಟಾರ ಸೈಕಲ್ ನಂಬರ ಕೆಎಃ29/ಇಸಿ/7871 ಈ ಗಾಡಿಯನ್ನು ನಾನೇ ಚಾಲನೆ ಮಾಡುತ್ತಿದೇನು. ನಾನು ಆ ದಿನ ಗಾಡಿಯನ್ನು ಚಾಲನೆ ಮಾಡುವ ಸ್ದಿತಿಯಲ್ಲಿ ಇರಲಿಲ್ಲ ಕಾರಣ ನಾನು ಮದ್ಯಪಾನ ಮಾಡಿದ್ದೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆ ದಿನ ನನ್ನ ಹಿಂದೆ ಆಕಾಶ ಎನ್ನುವವರು ಕುಳಿತಿದ್ದರು ಎಂದರೆ ಸರಿ. ಆ ದಿನ ನಾನು ಹೆಲ್ಮೆಟ್ ಧರಿಸಿರಲಿಲ್ಲವೆಂದರೆ ಸರಿ, ಆದರೆ ಹಿಂದೆ ಕುಳಿತಿದ್ದ ಆತ ದರಿಸಿದ್ದ ಎನ್ನುತ್ತಾರೆ. ಆ ದಿನ ಎಮ್ಮೆಗಳು ಬಂದಿದ್ದಕ್ಕೆ ಆ ಕಾರ ಬಂದು ನಮಗೆ ಡಿಕ್ಕಿ ಹೊಡೆಯಿತು ಎಂದು ಹೇಳಿರುತ್ತೇನೆಂದರೆ ಸಾಕ್ಷಿ ಎಮ್ಮೆಗಳು ಅಡ್ಡ ಬಂದಿದ್ದರಿಂದ ಅವುಗಳನ್ನು ತಪ್ಪಿಸಲು ಹೋಗಿ ನಮ್ಮ ವಾಹನಕ್ಕೆ ಡಿಕ್ಕಿ ಹೊಡೆಯಿತು ಎನ್ನುತ್ತಾರೆ. ಎಮ್ಮೆಗಳನ್ನು ತಪ್ಪಿಸಲು ಹೋಗಿ ಆತ ಮರಕ್ಕೆ ಡಿಕ್ಕಿ ಹೊಡೆದಾ ಎಂದರೆ ಸರಿಯಲ್ಲ. ಕಾರನ್ನು ನೀವು ಎಷ್ಟು ದೂರದಿಂದ ನೋಡಿದೀರಿ ಎಂದರೆ ಸಾಕ್ಷಿ 1–2 ಮೀಟರ ದೂರದಿಂದ ಅಷ್ಟೆ ಎನ್ನುತ್ತಾರೆ. ಅಪಘಾತವಾದ ರಸ್ತೆ ನಾನು ಹಾಜರುಪಡಿಸಿರುವ ದಾಖಲೆ ಪ್ರಕಾರ ನೇರ ರಸ್ತೆ ಇದ್ದು ಅಲ್ಲಿ ಯಾವುದೇ ತಿರುವು ಇರಲಿಲ್ಲವೆಂದರೆ ಸಾಕ್ಷಿ ಬಸ್ಸ ನಿಲ್ದಾಣದ ಬಳಿ ಕ್ರಾಸ ಇದೆ ಎನ್ನುತ್ತಾರೆ. ದೋಷಾರೋಪಣೆ ಪಟ್ಟಿಯಲ್ಲಿ ಪೋಲೀಸರು ನನ್ನನ್ನು ಕೂಡಾ ಆರೋಪಿ ಎಂದು ಸೇರಿಸಿರುತ್ತಾರೆಂದರೆ ಸಾಕ್ಷಿ ನನ್ನ ಗಾಡಿಗೆ ವಿಮೇ ಇಲ್ಲದ ಕಾರಣ ಸೇರಿಸಿದ್ದಾರೆಂದು ನುಡಿಯುತ್ತಾರೆ.

ಆಕಾಶ ಹಾಗೂ ನಾನು ಇಬ್ಬರು ನಮ್ಮ ತಪ್ಪಿನಿಂದ ಬಿದ್ದು ನಮ್ಮ ಗಾಡಿಗೆ ಇನ್ಶೂರನ್ಸ ಇಲ್ಲದ ಕಾರಣ ಕಾರಿನ ಮೇಲೆ ಆರೋಪ ಹೊರಿಸಿದ್ದೇನೆಂದರೆ ಅದು ಸರಿಯಲ್ಲ. ನನಗೆ ಆದಂತಹ ಗಾಯಗಳು ಸಾದಾ ಸ್ವರೂಪದ ಗಾಯಗಳು ಎಂದರೆ ಸಾಕ್ಷಿ ನನ್ನ ದೇಹದ ಬಲಗಡೆ ಭಾಗದಲ್ಲಿ ಎಲ್ಲ ಕಡೆ ರಾಡ್ ಇದೆ ಮೊದಲಿನಂತೆ ನನಗೆ ನಡೆಯಲು ಆಗುತ್ತಿಲ್ಲ ಎನ್ನುತ್ತಾರೆ. ಅಪಘಾತದವಾದ ನಂತರ ಬಾಗಲಕೋಟೆಯ ಗುಳೇದ ಆಸ್ಪತ್ರೆಗೆ ನಾನು ದಾಖಲಾದೇನು. ನನಗೆ ಅವರು ಸಂಪೂರ್ಣ ಚಿಕಿತ್ಸೆ ನೀಡಿ ನನ್ನನ್ನು ಆರಾಮ ಆಗಿದ್ದೀಯಾ ಎಂದು ವಾಪಸ್ಸು ಕಳುಹಿಸಿದರು ಎಂದರೆ ಸಾಕ್ಷಿ 15 ದಿನಗಳ ಕಾಲ ಒಳರೋಗಿಯಾಗಿ ದಾಖಲಾಗಿದ್ದು ಆ ನಂತರ ಡಿಸಚಾರ್ಜ ಆಗಿ 6 ತಿಂಗಳವರೆಗೂ ಮನೆಯಲ್ಲಿ ಬೆಡ್ ರೇಸ್ಟನಲ್ಲಿ ಇದ್ದೇನು. ನನಗೆ ಚಿಕಿತ್ಸೆ ನೀಡಿದ ವೈದ್ಯರು ಗುಳೇದ ಎಂಬುವವರು, ಅವರು ಸರಿಯಾಗಿ ನನಗೆ ಚಿಕಿತ್ಸೆ ನೀಡಿರುತ್ತಾರೆ ಎಂದರೆ ಸರಿ. ಅವರು ಸರಿಯಾಗಿ ಚಿಕಿತ್ಸೆ ಕೊಟ್ಟಿರುವ ಕಾರಣ ನಾನು ಸಂಪೂರ್ಣವಾಗಿ ಆರಾಮವಾಗಿದ್ದೇನೆಂದರೆ ಸರಿಯಲ್ಲ.

ನಾನು ಚಿಕಿತ್ಸೆಗಾಗಿ 6 ಲಕ್ಷ್ಯ ರೂಪಾಯಿ ಖರ್ಚು ಮಾಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ನಾನು ಖೊಟ್ಟಿ ದಾಖಲೆಗಳನ್ನು ಸೃಷಿ ಮಾಡಿಕೊಂಡು ಬಂದು ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ನನಗೆ ತಿಂಗಳಿಗೆ ಇಷ್ಟು ಪಗಾರ ಇತ್ತು ಎಂದು ತೋರಿಸಲು  ಎನಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ದಾಖಲೆ ಹಾಜರುಪಡಿಸಿಲ್ಲ ಎನ್ನುತ್ತಾರೆ. ನಾನು ಎನೂ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ಕೂಡಾ ನಾನು ಯಾವುದೇ ದಾಖಲೆ ಹಾಜರುಡಿಸಿಲ್ಲವೆಂದರೆ ಸರಿ. ಸರ್ಕಾರದ ರೀತಿ ನಿಯಮಗಳ ಪ್ರಕಾರ ಡೇಲಿ ವೈಜೆಸ್ ಎಂದರೆ 200 ರೂಪಾಯಿ ಕೊಡುತ್ತಾರೆ ಎಂದರೆ ಸರಿ. ಈಗಲೂ ಕೂಡಾ ನಾನು ಡೇಲಿ ವೈಜೆಸ್ ಮೇಲೆ ಕೆಲಸ ಮಾಡುತ್ತಿದ್ದೇನೆಂದರೆ ಸಾಕ್ಷಿ ನನ್ನನ್ನು ಅಲ್ಲಿಂದ ತೆಗೆದಿರುತ್ತಾರೆ, ಕಂಪ್ಯೂಟರ ಶಾಪನಲ್ಲಿ ಕೆಲಸ ಮಾಡುತ್ತಿದ್ದೇನೆ ಎನ್ನುತ್ತಾರೆ. ನನಗೆ ಕಂಪ್ಯೂಟರ ಶಾಪನಲ್ಲಿ ಡೇಲಿ ವೈಜೆಸ್ ಕೊಡುತ್ತಿದ್ದಾರೆ ಎಂದರೆ ಸರಿ. ನಾನು ಈಗ ಸಂಪೂರ್ಣವಾಗಿ ಆರಾಮವಾಗಿದ್ದೇನೆ ಮತ್ತು ಪಗಾರ ಕೂಡಾ ಪಡೆಯುತ್ತಿದ್ದೇನೆಂದರೆ ಸಾಕ್ಷಿ  ಕಂಪ್ಯೂಟರ ಶಾಪನಲ್ಲಿ ಕೆಲಸ ಮಾಡುತ್ತಿದ್ದೇನೆ ಎನ್ನುತ್ತಾರೆ.

7

ನಾನು ಸಂಪೂರ್ಣವಾಗಿ ಆರಾಮವಾಗಿದ್ದರು ಸುಳ್ಳು ಪರಿಹಾರ ಪಡೆಯುವ ಸಲುವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ತಪ್ಪಿನಿಂದ ಆಗಿರುವ ಕಾರಣ ವಿಮಾ ಕಂಪನಿ ನಮಗೆ ಪರಿಹಾರ ಕೊಡಲು ಬಾಧ್ಯಸ್ಥರು ಅಲ್ಲವೆಂದರೆ ಸರಿಯಲ್ಲ. ಮೋಟಾರ ಸೈಕಲ್ ನ್ನು ಈ ಕೇಸನಲ್ಲಿ ಪಕ್ಷಗಾರನ್ನಾಗಿ ಮಾಡಿಲ್ಲವೆಂದರೆ ಸರಿ. ಪಕ್ಷಗಾರನ್ನಾಗಿ ಮಾಡಿಲ್ಲವಾದ ಕಾರಣ ಈ ಕೇಸು ಕಾನೂನಿನ ಅಡಿಯಲ್ಲಿ ಊರ್ಜಿತವಾಗುವುದಿಲ್ಲವೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ